# ದಯಾರ ಬುಗ್ಯಲ್

## ಸ್ವರ್ಗದ ಸಾಂಗತ್ಯ ಕೊಡುವ ಹಸುರ ತಾಣ

■ ರವಿಶಂಕರ್ ಎಸ್.ಎಲ್.

**ಅಗಾಧ ಹಿಮ ಪರ್ವತಶ್ರೇಣಿಗಳ ಚೆಲುವನ್ನು ದರ್ಶನ ಮಾಡಿಸುವ ದಯಾರ ಬುಗ್ಯಲ್, ಅಚ್ಚ ಹಸುರು ತುಂಬಿದ ಹುಲ್ಲುಗಾವಲಿನ ತಾಣ. ಅತಿ ಎತ್ತರದ ಈ ಹುಲ್ಲುಗಾವಲಿನಲ್ಲಾಗುವ ಅನುಭವಗಳು ಸ್ವರ್ಗಸಮಾನ.**

ಜೀವನದಲ್ಲಿ ಒಮ್ಮೆಯಾದರೂ ಹಿಮಾಲಯದ ಗಿರಿಶಿಖರಗಳನ್ನು ಕಣ್ಣಾರೆ ಕಂಡು ಆನಂದಿಸಬೇಕು, ಶ್ವೇತಪರ್ವತಗಳ ಚೆಲುವನ್ನು ಮನದಲ್ಲಿ ತುಂಬಿಸಿಕೊಳ್ಳಬೇಕೆಂಬುದು ಎಷ್ಟೋ ಜನರ ಕನಸು. ಅಂಥದ್ದೊಂದು ಕನಸು ನನ್ನಲ್ಲೂ ಬಹುದಿನಗಳಿಂದ ಮನೆ ಮಾಡಿತ್ತು. ಹಾಗೆಯೇ, ಹಿಮಾಲಯದ ಬೆಟ್ಟಗಳನ್ನು ಕಣ್ತುಂಬಿಕೊಳ್ಳುವ ಹಾದಿಯನ್ನು ಹಿಡಿದಿದ್ದೆ.

ಹೊಸದಾಗಿ ಚಾರಣ ಮಾಡುವವರಿಗೆ, ಮೊದಲ ಸಲ ಹಿಮಾಲಯ ನೋಡುವ ಚಾರಣಿಗರಿಗೆ ಹಾಗೂ ಸುಲಭ ಚಾರಣ ಬಯಸುವವರಿಗೆ 'ದಯಾರ ಬುಗ್ಯಲ್' ಹೇಳಿಮಾಡಿಸಿದ ತಾಣ. ಸಾಕಷ್ಟು ಹೊಸಬರಿದ್ದ ಕಾರಣ, 'ದಯಾರ ಬುಗ್ಯಲ್'ಗೆ ಚಾರಣ ಹೋಗುವುದೆಂದು ನಮ್ಮ 'ಸಂಚಾರಣ' ತಂಡ ನಿರ್ಧರಿಸಿತು.

ದಯಾರ ಬುಗ್ಯಲ್, ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯಲ್ಲಿದೆ. ಬೆಂಗಳೂರಿನಿಂದ ಹೊರಟ ನಮ್ಮ ತಂಡ ದೆಹಲಿ, ಹರಿದ್ವಾರಗಳ ಮೂಲಕ ಉತ್ತರಕಾಶಿ ತಲುಪಿತು. ಮೂರು ದಿನಗಳ ಈ ಚಾರಣಕ್ಕೆ ಎಲ್ಲರೂ ಉತ್ಸುಕರಾಗಿದ್ದೆವು. ದಯಾರ, ಸಮುದ್ರ ಮಟ್ಟದಿಂದ ಸುಮಾರು ಹತ್ತು ಸಾವಿರ ಅಡಿಗಳಿಗಿಂತ ಎತ್ತರದಲ್ಲಿದ್ದು, ಉತ್ತರ ಕಾಶಿಯಿಂದ 40 ಕಿ.ಮೀ. ದೂರದಲ್ಲಿದೆ.

'ದಯಾರ' ಎಂದರೆ ಸ್ಥಳೀಯ ಭಾಷೆಯಲ್ಲಿ, ವೃತ್ತಾಕಾರದ ಭೂಮಿ ಎಂದರ್ಥ. 'ಬುಗ್ಯಲ್' ಎಂದರೆ ಹುಲ್ಲುಗಾವಲು. ಅತಿ ಎತ್ತರದಲ್ಲಿರುವ ಹುಲ್ಲುಗಾವಲಿನ ದುಂಡನೆಯ ಪ್ರದೇಶ ಎಂದು ದಯಾರ ಬುಗ್ಯಲ್ ಅನ್ನು ಅರ್ಥೈಸಲಾಗಿದೆ.

ಬೆಳಗ್ಗೆ 8 ಗಂಟೆಗೆ 'ಬಾರಸು' ಹಳ್ಳಿಯಿಂದ ಚಾರಣ ಶುರುಮಾಡಿದೆವು. ನಮ್ಮ ಮುಂದಿನ ಕ್ಯಾಂಪ್ 'ಬರ್ನಾಲಾ' ಆಗಿತ್ತು. ಸುಮಾರು ಐದಾರು ಗಂಟೆ ದೇವದಾರು ಮರಗಳ ಕಾಡಿನ ಮಧ್ಯೆ ಏರು ನಡಿಗೆ. ಪ್ರತಿಯೊಬ್ಬರೂ 2 ಲೀಟರ್ ಕುಡಿಯುವ ನೀರನ್ನು ಕಡ್ಡಾಯವಾಗಿ ಇಟ್ಟುಕೊಳ್ಳಬೇಕಿತ್ತು. ಸೂರ್ಯ ಝಗಝಗಿಸುತ್ತಿದ್ದ. ಕಾಲುಗಳನ್ನು ಎಳೆದುಕೊಂಡು ಸುಮಾರು 2 ಗಂಟೆಗಳ ಕಾಲ ಏರಿದೆವು. ನಮಗೆ ಗೊತ್ತಿಲ್ಲದೆಯೇ ನಾವು ತಂದಿದ್ದ 2 ಲೀಟರ್ ನೀರು ಖಾಲಿ! ಸ್ವಲ್ಪ ಸುಧಾರಿಸಿಕೊಂಡು ಮುನ್ನಡೆದೆವು.

ನಮ್ಮ ಗೈಡ್ ಷೆರ್ಪಾ 60 ವರ್ಷ ಮೀರಿದ್ದ ಯುವಕ! ತಾನು ಯಾವ ಯಾವ ಬಾಲಿವುಡ್ ತಾರೆಯರಿಗೆ ಚಾರಣಕ್ಕೆ ಸಹಾಯ ಮಾಡಿದ್ದೆ ಎಂಬುದನ್ನು ಸುಂದರ ಕಥೆಗಳಾಗಿಸಿ ನಮ್ಮನ್ನು ಹುರಿದುಂಬಿಸಿ ಅನಾಯಾಸವಾಗಿ ನಡೆಯುತ್ತಿದ್ದ! ನಾವು ಏದುಸಿರಿನೊಂದಿಗೆ ಮರಗಳ ಕೆಳಗೆ ನಿಂತು ನಿಂತು ಮುಂದುವರೆಯುತ್ತಿದ್ದೆವು.

ಹಿಮಾಲಯದಲ್ಲೇ ಹುಟ್ಟಿ ಬೆಳೆದವರಿಗೆ ಶ್ವಾಸಕೋಶಗಳು ಸ್ವಾಭಾವಿಕವಾಗಿಯೇ ದೊಡ್ಡದಿದ್ದು, ನಮ್ಮ ಹಾಗೆ ಬೇಗ ಏದುಸಿರು, ಸುಸ್ತಾಗುವುದಿಲ್ಲ ಎಂಬುದನ್ನು ಷೆರ್ಪಾ ಹೇಳಿದ.

ಸುಮಾರು 6 ಗಂಟೆಗಳ ಕಾಲ ಚಾರಣ ಮಾಡಿದ ನಮಗೆ ಹಸಿವು–ಬಾಯಾರಿಕೆ–ದಣಿವು ಹೆಚ್ಚಾಯಿತು. ಮಧ್ಯಾಹ್ನ ಸುಮಾರು 3 ಗಂಟೆಗೆ ಬರ್ನಾಲ ತಲುಪಿದೆವು. ದೂರದಲ್ಲಿ, ನಮ್ಮ ಪ್ರವಾಸಿ ಏಜೆನ್ಸಿಯವರು ಹಾಕಿದ್ದ ಬಣ್ಣಬಣ್ಣದ ಕ್ಯಾಂಪ್ ಡೇರೆಗಳು ಕಂಡವು. ನಮಗಾಗಿದ್ದ ದಣಿವಿಗೆ, ಆ ಡೇರೆಗಳೇ ಅರಮನೆಗಳಂತೆ ಕಂಡವು!

ನಾವು ಡೇರೆಗಳಲ್ಲಿ ವಿಶ್ರಾಂತಿ ಪಡೆಯುವಾಗ, ಏಜೆನ್ಸಿಯ ಪೋರ್ಟರ್‌ಗಳು ಕುದುರೆಗಳನ್ನು ಮೇಯಲು ಬಿಟ್ಟು ಕಾರ್ಡ್ ಆಟ ಆಡುತ್ತಿದ್ದರು.

